
ಅನೂರಾಧಾಳ ದೇಹ ಮಾತ್ರೆಗಳಾಗಿ ಬದಲಾಗಿ ಆಕೆ ತೀರಿಕೊಂಡ ವಿಷಯ ಎಲ್ಲಾ ಪತ್ರಿಕೆಗಳ ಸ್ಟ್ರಿಂಗರ್ ಗಳಿಗೆ ಗೊತ್ತಾಗಿ ಹೋಯಿತು. ಆ ಜಿಲ್ಲೆಯಲ್ಲಿ ನಡೆಯುವ ಅಪರೂಪ ಘಟನೆಗಳನ್ನು ವೀಡಿಯೋ ಮಾಡಿ ಆ ತುಣುಕುಗಳನ್ನು ಸುದ್ದಿ ಚಾನೆಲ್ ಗಳಿಗೆ ಮಾರಾಟ ಮಾಡುವ ವೀಡಿಯೋ ಗ್ರಾಫರನ ಕಿವಿಗೂ ಈ ಸುದ್ದಿ ಬಿದ್ದಿತು. ಇವರೆಲ್ಲಾ ಬರುವ ಮುನ್ನವೇ ಅನೂರಾಧಾಳ ದೇಹ ದಹನ ಮುಗಿದರೆ ಒಳಿತು ಎಂದು ಸೂರ್ಯಾರಾವು ಅಂದುಕೊಂಡ.



'ಮಾವಯ್ಯ ನೋಡಲಿ ಬಿಡು ಪಾಪಾ' ಅಂದಳು ರಜನಿ. ಪ್ರಕಾಶರಾವು ಅರ್ಧಗಂಟೆಯ ಕಾಲ ಅನೂರಾಧಾಳ ದೇಹವನ್ನು ಪರೀಕ್ಷೆ ಮಾಡಿ ನೋಟ್ಸ್ ಮಾಡಿಕೊಂಡ. ಕೆಲವರು ಫೋಟೋ ತೆಗೆದುಕೊಂಡರು. ಇದೆಲ್ಲಾ ಅವಳ ದೇಹಕ್ಕೆ ಮಾತ್ರ. ಅವಳ ಆತ್ಮ ಯಾವಾಗಲೋ ಸ್ವರ್ಗಕ್ಕೆ ಹೋಗಿದೆ' ಎಂದು ಅಪ್ಪನಿಗೆ ರಜನಿ ಸಮಾಧಾನ ಹೇಳಿದಳು.

ಕೊನೆಗೆ ಅನೂರಾಧಾಳ ಹೆಣ ಚಿತೆ ಏರಿತು.

ಆ! ಇನ್ನೆಲ್ಲಿಯ ದೇಹ ? ಅದರಲ್ಲಿ ಬಹುತೇಕ ಭಾಗ ಇಲ್ಲವೇ ಇಲ್ಲ. ನಾಲ್ಕು ವರ್ಷದ ಹಿಂದೆ ಗರ್ಭಾಶಯ ತೆಗೆದು ಹಾಕಿದರು. ಅದರೊಟ್ಟಿಗೆ ಓವರೀಸ್ ಕೂಡಾ ತೆಗೆದು ಹಾಕಿದರು. ಅಪೆಂಡಿಕ್ಸ್ ಕೂಡಾ ಅದರೊಟ್ಟಿಗೇ ಆಯಿತು. ಇನ್ನು ಉಳಿದ ರಕ್ತ,ಮಾಂಸ ಮಾತ್ರೆಗಳಾಗಿ ಬದಲಾಗಿದ್ದು ಕಾಣುತ್ತಲೇ ಇದೆ. ಇದ್ದರೆ ಮಿದುಳು, ಹೃದಯ ಇದ್ದಿರಬೇಕು' ಸೂರ್ಯಾರಾವು ಕಣ್ಣೊರೆಸಿಕೊಳ್ಳುತ್ತಾ ಹೇಳಿದ. ಅನೂರಾಧಾಳ ದೇಹ ರಂಗುರಂಗಾದ ಜ್ವಾಲೆಗಳಿಂದ ಉರಿಯುತ್ತಿತ್ತು. ಮಾತ್ರೆಗಳ ಕೆಮಿಕಲ್ಸ್ ನಿಂದ ಎದ್ದ ಬಣ್ಣಗಳವು. ಇದ್ದಕ್ಕಿದ್ದಂತೆ ಏನೋ ಸಿಡಿದ ಸದ್ದು. ಚಿತೆಯಿಂದ ಹಸಿರಾದ ಪಾಚಿಕಟ್ಟಿದ ವಸ್ತುವೊಂದು ಹಾರಿ ಬಂದು ಸೂರ್ಯಾರಾವನ ಪಾದದ ಬಳಿ ಬಿತ್ತು. 'ಇದೇನಿದು' ಎನ್ನುತ್ತ ಸೂರ್ಯಾರಾವು ಗಾಬರಿಯಾದ. ಚಾಕುವಿನಿಂದ ಪಾಚಿಯನ್ನೆಲ್ಲಾ ಪ್ರಕಾಶರಾವು ಗೀರಿ ಸ್ವಚ್ಛ ಮಾಡಿದ. ಅದರಲ್ಲಿ ಫಳ ಫಳ ಹೊಳೆಯುವ ಅನೂರಾಧಾಳ ಮಿದುಳು. ಸೂರ್ಯಾರಾವು ಅದನ್ನು ಗುರುತು ಹಿಡಿದ. ಮದುವೆಯಾದ ಹೊಸತರಲ್ಲಿ ಅವನೊಂದಿಗೆ ಚೆಸ್ ಆಡಿದ ಮಿದುಳು. ಬ್ಯಾಂಕ್ ಎಕ್ಸಾಮಿನಲ್ಲಿ ರ್‍ಯಾಂಕ್ ಪಡೆದ ಮಿದುಳು. ಹೀಗೆ ಪಾಚಿ ಹಿಡಿದಿದೆಯಲ್ಲಾ?

ಪ್ರಕಾಶರಾವು ನಗುತ್ತಾ 'ನಿಮ್ಮ ಮನೆಯ ಸಿಂಕು,ಬಚ್ಚಲು ಮನೆ ಮಿರುಗುವ ಹಾಗೆ ತೊಳೆಯುತ್ತಿದ್ದಳಲ್ಲಾ! ಆ ಪಾಚಿ ಬಂದು ಇವಳ ಮಿದುಳು ಸೇರಿದೆ. ಅಂದ.

ಹಾಗೆ ಅನೂರಾಧಾಳ ದೇಹವನ್ನು ಅಗ್ನಿಗೆ ಒಪ್ಪಿಸಿ ಸ್ನಾನ ಮಾಡಿ ಮನೆಗೆ ಬಂದು ಅವಳ ಫೋಟೋಗಳಲ್ಲಿ ಚೆನ್ನಾಗಿರುವುದನ್ನು ಆರಿಸಿ ಲ್ಯಾಮಿನೇಟ್ ಮಾಡಿಸುವ ಕೆಲಸದಲ್ಲಿದ್ದ ಸೂರ್ಯಾರಾವನಿಗೆ, 'ನಾನಿನ್ನು ಬರ್ತೀನಿ ಕಣಯ್ಯಾ' ಅಂದ ಪ್ರಕಾಶರಾವು.

'ನಾನೂ ನಿನ್ನೊಟ್ಟಿಗೆ ಬರುವೆ ಅಂಕಲ್' ಸುಬ್ಬಾರಾವನ ಮಗಳು ಸುಶೀಲ ತಯಾರಾದಳು.

'ನನ್ನಿಂದ ನಿನಗೇನಾಗಬೇಕಮ್ಮಾ' ಪೆಥಾಲಜಿ ಪ್ರೊಫೆಸರ್ ಪ್ರಕಾಶರಾವು ಕೇಳಿದ. ಆತ ಅನೂರಾಧಾಳನ್ನು ಸ್ವಂತ ತಂಗಿಯ ಹಾಗೆ ಕಾಳಜಿ ಮಾಡುತ್ತಿದ್ದ. ಎಷ್ಟೋ ಬಾರಿ ಕೇಳದೇ ಕೊಟ್ಟ ಸಲಹೆಗಳಿಗೆ ಉಗಿಸಿಕೊಂಡಿದ್ದ.

'ಅನೂರಾಧಾ ಆಂಟೀಗೆ ಬಂದ ಕಾಯಿಲೆ ಯಾವುದು ನನಗೆ ಗೊತ್ತಾಗಬೇಕು ಅಂಕಲ್' ಅಂದಳು.

'ನನಗೂ ಹೇಳು ಅಂಕಲ್. ಅಮ್ಮನಿಗೆ ಬಂದ